ಅವಧಿಪೂರ್ವ ವರ್ಗಾವಣೆ– ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ

೪೦೩೫. ಶ್ರೀ ಬಿ. ಎ. ಉಮರಬ್ಬ (ವಿಟ್ಲ).— ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಈ ಬಾರಿ ನಡೆದ ವರ್ಗಾವಣೆಗಳಲ್ಲಿ ಅವಧಿಪೂರ್ವ ವರ್ಗಾವಣೆ ಏನಾದರೂ ಆಗಿದೆಯೇ?

ಆ) ಈ ವರ್ಗಾವಣೆಗೆ ಮುಖ್ಯ ಮಂತ್ರಿಗಳ ಅನುಮತಿ ಪಡೆಯಲಾಗಿತ್ತೆ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು).—

ಆ) ಹೌದು.

ಅ) ಸಾಮಾನ್ಯ ವರ್ಗಾವಣೆ ಸಮಯದಲ್ಲಿ 'ಸಿ' ವರ್ಗಕ್ಕೆ ಸಂಬಂಧಪಟ್ಟ ಸಚಿವರು ಅವಧಿಪೂರ್ವ ವರ್ಗಾವಣೆಗಳನ್ನು ಮಾಡಬಹುದಾಗಿರುವುದರಿಂದ ಮಾನ್ಯ ಸಮಾಜ ಕಲ್ಯಾಣ ಸಚಿವರ ಆದೇಶ ಪಡೆದು ವರ್ಗಾವಣೆ ಮಾಡಲಾಗಿದೆ. ಕೆಲವು ಪ್ರಕರಣಗಳಲ್ಲಿ ನಿಯಮಾವಳಿಗಳ ಪ್ರಕಾರ ಮಾನ್ಯ ಮುಖ್ಯ ಮಂತ್ರಿಯವರ ಅನುಮತಿಯನ್ನು ಪಡೆಯಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿಗೆ ಬಸ್ಸುಗಳನ್ನು ಒದಗಿಸುವುದು

೪೦೩೭. ಶ್ರೀ ಬಿ.ಎ. ಉಮರಬ್ಬ (ವಿಟ್ಲ).— ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಸಾರ್ವಜನಿಕರು ಸಂಚಾರಕ್ಕಾಗಿ, ಬಸ್ಸುಗಳಿಗಾಗಿ ಸಲ್ಲಿಸಲಾಗಿರುವ ಕೋರಿಕೆಗಳೆಷ್ಟು? (ವಿವರ ಒದಗಿಸುವುದು),

ಆ) ಇವುಗಳನ್ನು ಎಷ್ಟು ಅವಧಿಯಲ್ಲಿ ಪೂರೈಸಲಾಗುತ್ತಿದೆ?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಸಾರ್ವಜನಿಕರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳ ಸೌಕರ್ಯಕ್ಕಾಗಿ ಸುಮಾರು ೧೬ ಬೇಡಿಕೆಗಳು ಬಂದಿವೆ. ಪಟ್ಟಿಯನ್ನು ಲಗತ್ತಿಸಿದೆ.

ಆ) ಈಗಾಗಲೇ ೯ ಬೇಡಿಕೆಗಳನ್ನು ಕಾರ್ಯಗತಗೊಳಿಸಲಾಗಿದೆ. ಇನ್ನು ೩ ಬೇಡಿಕೆಗಳನ್ನು ಶೀಘ್ರದಲ್ಲಿಯೇ ಕಾರ್ಯಗತಗೊಳಿಸಲಾಗುವುದು. ಉಳಿದ ನಾಲ್ಕು ಬೇಡಿಕೆಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗದು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

ಬೆಂಗಳೂರು ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಿಂದ ಬಸ್ಸಿನ ಸೌಕರ್ಯವನ್ನು ಕೋರಿ ಬಂದ ಅರ್ಜಿಗಳು

ಕ್ರಮ ಸಂಖ್ಯೆ	ಅರ್ಜಿದಾರರು	ಬೇಡಿಕೆಗಳು
೧	೨	೩
೧	ಶ್ರೀ ಕೆ. ರಮೀಂದ್ರ ಕಂಬಳಿ, ಪರಂಗಿ ಪೇಟೆ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ	೧. ಮಂಗಳೂರಿನಿಂದ ಪರಂಗಿಪೇಟೆಗಾಗಿ ಸುಚರಿ ಮಲ್ಲಿಯಪರೆಗೆ ಬಸ್ಸು ಸಂಚಾರದ ಬಗ್ಗೆ
೨	ಪ್ರಧಾನರು, ನರಪಾಡಿ ಮಂಡಲ ಪಂಚಾಯತ್ ಆಂಚೆ ನರಪಾಡಿ ಬಂಟ್ವಾಳ. ದಕ್ಷಿಣ ಕನ್ನಡ.	೧. ಪಗ್ಗ ಉಳಿ ರಸ್ತೆಯಲ್ಲಿ ಮಂಗಳೂರಿನಿಂದ ಕಕ್ಕಪದವಿನವರೆಗೆ ಸರಕಾರಿ ಬಸ್ ಬರುವಂತೆ ಒತ್ತಾಯದ ಕುರಿತು.
೩	ಕಾವಳಮೂಡೂರು ಮಂಡಲ ಪಂಚಾಯತ್ ಕಾವಳಕಟ್ಟೆ ಆಂಚೆ, ಬಂಟ್ವಾಳ, ದಕ್ಷಿಣ ಕನ್ನಡ.	೧. ವೇಗದೂತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಕಾವಳಕಟ್ಟೆಯಲ್ಲಿ ನಿಲ್ಲಿಸುವ ಕುರಿತು.
೪	ಗ್ರಾಹಕರ ಹಿತರಕ್ಷಣಾ ಸಮಿತಿ, ಕಾವಳ ಕಟ್ಟೆ ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ	೧. ಕಾವಳಕಟ್ಟೆಯಲ್ಲಿ ವೇಗದೂತ ಬಸ್ಸುಗಳಿಗೆ ನಿಲುಗಡೆ ಒದಗಿಸುವ ಬಗ್ಗೆ.
೫	ಶ್ರೀ ಲಿಂಗಪ್ಪ, ಜಿಲ್ಲಾಪರಿಷತ್ ಕ್ಷೇತ್ರದ ಸದಸ್ಯ ನರವಾಡಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ	೧. ಪಗ್ಗ, ಉಳಿ, ರಸ್ತೆಯಲ್ಲಿ ಬಸ್ ಸಂಚಾರ ೨ ತಿಂಗಳಿಂದ ಸ್ಥಗಿತಗೊಂಡಿದೆ. ಇದನ್ನು ಪ್ರಾರಂಭಿಸುವ ಬಗ್ಗೆ ೨. ನಾವೂರು ನರಪಾಡಿ ರೋಡಿನಲ್ಲಿ ಈಗ ಬೆಳಿಗ್ಗೆ ಬರುವ ಬಸ್‌ಗಳು ಸಾಯಂಕಾಲ ೨ ಗಂಟೆಗೆ ಒಂದು ಬಸ್ ಮತ್ತು ೪ ಗಂಟೆಗೆ ಒಂದು ಬಸ್ ಬಂದು ಹೋಗುವಂತೆ ಮಾಡುವ ಬಗ್ಗೆ ೩. ಸಾಯಂಕಾಲ ೫–೩೦ ಗಂಟೆಗೆ ಬಂಟ್ವಾಳದಿಂದ ಹೊರಟು ರಾತ್ರಿ ಕಕ್ಕಪದವಿನಲ್ಲಿ ಬೆಳಿಗ್ಗೆ ೮ ಗಂಟೆಗೆ ಕಕ್ಕಪದವಿನಿಂದ ಹೊರಟು ಬಂಟ್ವಾಳಕ್ಕೆ ತಲುಪುವಂತೆ ಮಾಡುವ ಬಗ್ಗೆ
೬	ಬಂಟ್ವಾಳ ತಾಲ್ಲೂಕಿನ ಸೂರಿಬೈಲು, ಮಂಚಿಕೊಳ್ನಾಡು, ಬೋಳಂತೂರು ಹಾಗೂ ಆಸಪಾಸಿನ ನಾಗರೀಕರು ಬರೆದುಕೊಂಡ ಅರ್ಜಿ	೧. ರಾಷ್ಟ್ರೀಕರಣಗೊಳಿಸಿದ ಮಂಗಳೂರು ಸಾಲೆತ್ತೂರು ಮಯಾ ಬಿ. ಸಿ ರೋಡು, ಕಲಡ್ಕ–ಸೂರಿಬೈಲು ಮಂಚಿ ಮಾರ್ಗ ಸರಕಾರಿ ಬಸ್ಸು ಸರ್ವೀಸು ಬೇಕು.
೭	ಶ್ರೀ ಎಸ್. ಎಂ. ಸಾಹೇಬ್‌ಬ್ಯಾರಿ ಸೂರಿಬೈಲು, ಬೋಳಂತೂರು ಆಂಚೆ ಬಂಟ್ವಾಳ ತಾಲ್ಲೂಕು	೧. ಬಿ.ಸಿ. ರೋಡು ಕಲಡ್ಕ, ಸೂರಿಬೈಲು ಮಂಚಿ, ಸಾಲೆತ್ತೂರಿಗೆ ಸಾರಿಗೆ ಸೌಕರ್ಯದ ಬಗ್ಗೆ ಕೋರಿಕೆ
೮	ಅಧ್ಯಕ್ಷರು, ಯುವಜನತಾ, ೨೧ ನೇ ಗೋಳ್ಕ–ಪೊಳಲು ಮಂಡಲ ಸಮಿತಿ, ಕಲ್ಕಡ	೧. ಮಂಗಳೂರು ಪುತ್ತೂರು ತಡೆರಹಿತ ಬಸ್ಸುಗಳಿಗೆ ಕಲ್ಕಡದಲ್ಲಿ ನಿಲುಗಡೆ ನೀಡುವ ಬಗ್ಗೆ.

೧	೨	೩
೯	ಶ್ರೀ ಬಿ. ಸತೀಶ ಬಾಳಿಗ ಬಿನ್ ಬಿ. ಮಾಧವ ಬಾಳಿಗ ಬಟ್ಟೆ ವ್ಯಾಪಾರಿಗಳು, ಬಂಟ್ವಾಳ	೧. ಬಂಟ್ವಾಳದಿಂದ- ಮಂಗಳೂರಿಗೆ ಹೋಗುವ ಸರ್ವಿಸುಗಳಿಗೆ ಬೆಳಿಗ್ಗೆ ಮತ್ತು ಸಂಜೆಯ ವೇಳೆ ಹೊರಡುವ ಸರ್ವೀಸುಗಳನ್ನು ೧೦ ನಿಮಿಷ ನಿಂತು ಹೊರಡುತ್ತವೆ ಆ ವೇಳೆಯನ್ನು ೨೦ ನಿಮಿಷ ಇದ್ದು ಹೋಗುವಂತೆ ೨. ದೂರ ಕ್ರಮಿಸುವ ವಾಹನಗಳನ್ನು ಬಂಟ್ವಾಳ ಪಟ್ಟಣದಲ್ಲಿ ಹೋಗುವಂತೆ ಮಾಡುವ ಬಗ್ಗೆ.
೧೦	ಶ್ರೀ ಯಂ. ಚಂದ್ರನಾಥ ಆಳ್ವ, ಉಪ ಪ್ರಧಾನ ವೆರವಾಯಿ ಮಂಡಲ ಪಂಚಾಯತ್ ಬಂಟ್ವಾಳ್ ತಾಲ್ಲೂಕು	೧. ಆಳಿಕೆಗೆ ಸಮಯಕ್ಕೆ ಸರಿಯಾಗಿ ಬಸ್ಸುಗಳನ್ನು ಓಡಿಸುವಂತೆ ಕೋರಿರುವ ಬಗ್ಗೆ
೧೧	ಶ್ರೀ ಕಾರಿಂಜೇಶ್ವರ ದೇವಸ್ಥಾನ ಕಾರಿಂದ ಕಾವಳ ಮೂಡೂರು ಗ್ರಾಮ ಬಂಟ್ವಾಳ ತಾಲ್ಲೂಕು ದಕ್ಷಿಣ ಕನ್ನಡ	೧. ಶ್ರೀ ಕಾರಿಂಜೇಶ್ವರ ದೇವಸ್ಥಾನದ ರತೋತ್ಸವವು ಪ್ರತಿ ವರ್ಷ ಮಾಡಲಾಗುತ್ತದೆ. ಆ ವರ್ಷ ವಿಶೇಷ ವಾಹನವನ್ನು ಓಡಿಸುವ ಬಗ್ಗೆ.
೧೨	ಶ್ರೀ ಎಸ್. ಅಬ್ದುಲ್‌ರಹಿಮಾನ್, ಬಂಟ್ವಾಳ ತಾಲ್ಲೂಕು	೧. ಬಂಟ್ವಾಳ ತಾಲ್ಲೂಕಿನ ಗೋಳ್ತಮಜಲು, ಬೋಳ ವಾರು ಹಾಗೂ ಮಂಚಿ ಸೂರಿಬೈಲು ಕೊಳ್ನಾಡು ಗ್ರಾಮಗಳಿಗೆ ಬಸ್ಸಿನ ಸೌಕರ್ಯ ಒದಗಿಸುವ ಬಗ್ಗೆ.
೧೩	ಪ್ರಧಾನರು, ಮಂಡಲ ಪಂಚಾಯಂತ್ ಆಂಚೆ ಬಾಳಪನಿ ಬಂಟ್ವಾಳ ದ.ಕ.	೧. ಸಾಲೆತ್ತೂರಿನಲ್ಲಿ ತಂಗುವ ಸರಕಾರಿ ಬಸ್ಸಿನಲ್ಲಿ ಮಡಿಪುವರೆಗೆ ಬರುವಂತೆ ಮಾಡುವ ಬಗ್ಗೆ
೧೪	ಶ್ರೀ ಬಿ. ಮಹಮ್ಮದ್ ಖುನ್ನಿ, ಕರ್ನಾಟಕ ಪ್ರದೇಶ ಯುವ ಜನತಾ ಸದಸ್ಯ ವಿಟ್ಲ ದಕ್ಷಿಣ ಕನ್ನಡ	೧. ವಿಟ್ಲದಿಂದ ಬೆಂಗಳೂರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಒಂದು ರಾತ್ರಿ ಸರ್ವೀಸನ್ನು ಮಂಜೂರು ಮಾಡುವ ಕುರಿತು.
೧೫	ಶ್ರೀ ಯಂ. ಗಂಗಾಧರ ಭಟ್ ಅಧ್ಯಕ್ಷರು, ಶ್ರೀ ಸತ್ಯ ಸೇವಾ ಸಾಯಿ ಲೋಕಸೇವಾ ಟ್ರಸ್ಟ್, ಆಳಿಕೆ	೧. ಆಳಿಕೆ-ಪುತ್ತೂರು ಮತ್ತು ಆಳಿಕೆ ಮಂಗಳೂರಿಗೂ ಹೊಸ ಸರ್ವೀಸನ್ನು ಓಡಿಸುವಂತೆ ಕುರಿತು.
೧೬	ವಿದ್ಯಾರ್ಥಿಗಳು, ಎಸ್. ಪಿ. ಎಸ್. ಕಾಲೇಜು, ಬಂಟ್ವಾಳ	೧. ಧರ್ಮಸ್ಥಳ-ಪುತ್ತೂರು ಬಸ್ ದಿನಾ ಎಸ್. ಎ. ಎಸ್ ಕಾಲೇಜು, ಬಂಟ್ವಾಳ ಇಲ್ಲಿಗೆ ಬೆಳಿಗ್ಗೆ ೧೦ ಗಂಟೆಗೆ ಬಂದು ಸಂಜೆ ೪-೧೦ ಗಂಟೆಗೆ ಬಂದು ತಲುಪುವಂತೆ ವ್ಯವಸ್ಥೆ ಮಾಡುವಂತೆ ಕೋರಿ.

ರಸ್ತೆ ಸಾರಿಗೆ ವಾಹನದ ಬಿಡಿ ಭಾಗಗಳನ್ನು ವಿಲೇವಾರಿ ಮಾಡುವ ಬಗ್ಗೆ

೪೦೩೪. ಶ್ರೀ ಬಿ. ಎ. ಉಮ್ಮರಬ್ಬ (ವಿಟ್ಲ) — ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ರಸ್ತೆ ಸಾರಿಗೆ ನಿಗಮದ ನಿರುಪಯುಕ್ತ ಬಿಡಿ ಭಾಗಗಳು ಟೈರು, ಟ್ಯೂಬು ಮತ್ತು ಇಂಜಿನ್ ಆಯಿಲ್ ಇತ್ಯಾದಿಗಳನ್ನು ಏನು ಮಾಡಲಾಗುತ್ತಿದೆ?

ಆ) ಗಿರಿಜಾರಂದೀಚೆಗೆ ಈ ವಸ್ತುಗಳ ವಿಲೇವಾರಿ ಬಗೆಗಿನ ವಿವರಗಳನ್ನು ನೀಡುವುದೆ?